ಸಿ.ಸಿ.ನಂ. 129-2013

ದಿನಾಂಕಃ 14-07-2022 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಆರೋಪಿ ಪರವಾಗಿ ಶ್ರೀ. ಬಿ.ಎನ್.ಆರ್ ವಕೀಲರಿಂದ.

1. ಪಿರ್ಯಾದಿಯು ನನಗೆ ಹಿರಿಯ ಸಹೋದರಿಯ ಮಗ. ಪಿರ್ಯಾದಿಯಲ್ಲಿರುವ ಎಲ್ಲಾ ಅಂಶಗಳು ನನಗೆ ಗೊತ್ತು, ಪಿರ್ಯಾದಿಯನ್ನು, ಪಿರ್ಯಾದಿದಾರರು ಹಾಗೂ ನಾನು ಹೇಳಿದ ಮೇರೆಗೆ ನನ್ನ ವಕೀಲರು ಬರೆದಿರುತ್ತಾರೆ. ನೀವು ನಿನ್ನೆ ನನಗೆ ಕರೆ ಮಾಡಿದ್ದು, ಆಗ ಒಂದು ವೇಳೆಗೆ ನಾನು ಪಾಟೀ ಸವಾಲು ಮಾಡುವುದಿದ್ದಲ್ಲಿ ಆರೋಪಿಯಿಂದ ಬಾಂಡ್ ಪೇಪರನ ಮೇಲೆ ಪ್ರಶ್ನೆಗಳನ್ನು ಬರೆದು ಕೊಂಡು ಕೇಳಬೇಕು ಎಂದು ತಿಳಿಸಿರುತ್ತೀರಾ ಎಂದರೆ ಸರಿ. ಸಾಕ್ಷಿ ಮುಂದುವರೆದ ಪ್ರಾಸಾ – 1 ರವರು ಪಾಟೀ ಸವಾಲಿನ ಸಂದರ್ಭದಲ್ಲಿ ನನ್ನ ಚಾರಿತ್ರ್ಯವನ್ನು ತೇಜೋವಧೆ ಮಾಡಿದ್ದರಿಂದ ಆ ರೀತಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಅದೇ ರೀತಿ ನಿನ್ನೆ ಕರೆ ಮಾಡಿದಾಗ ಆರೋಪಿ ಮತ್ತು ನನ್ನ ಮೇಲೆ ಡಿಫಾರಮೇಶನ್ ಪ್ರಕರಣವನ್ನು ಹೂಡಿತ್ತೇನೆ ಎಂದು ಧಮಕಿ ಹಾಕಿರುತ್ತೀರಾ ಎಂದರೆ ಸಾಕ್ಷಿಯು ನಾನು ಕೇವಲ ಆ ರೀತಿ ಮಾಹಿತಿಯನ್ನು ತಿಳಿಸಿರುತ್ತೇನೆ, ಯಾವುದೇ ಧಮಕಿ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ.

2. ನನ್ನ 42 ವರ್ಷ ಸೇವೆಯಲ್ಲಿ ನಾನು ಬಾಂಡ್ ಮೇಲೆ ಪ್ರಶ್ನೆಗಳನ್ನು ಬರೆಸಿಕೊಂಡು ಪಾಟೀ ಸವಾಲನ್ನು ಮಾಡಿರುವುದಿಲ್ಲ, ಸಾಕ್ಷಿ ಮುಂದುವರೆದು ಅಂತಹ ಸಂದರ್ಭ ಬಂದಿರುವುದಿಲ್ಲ, ಬಾಂಡ್ ಮೇಲೆ ಪ್ರಶ್ನೆಗಳನ್ನು ಬರೆಸಿಕೊಂಡು ಪಾಟೀ ಸವಾಲನ್ನು ಮಾಡಲು ಭಾರತೀಯ ಸಾಕ್ಷಿ ಕಾಯ್ದೆಯಲ್ಲಿ ಇದೆ. ನಾನು ಆರೋಪಿಯ ಕುಟುಂಬದ ವಕೀಲನಾಗಿರುತ್ತೇನೆ ಎಂದರೆ ಸರಿ. ನನ್ನ ಕುಟುಂಬಕ್ಕೆ ಸಂಬಂಧಿಸಿದಂತೆ ಭಾಗಾಂಶ ಕೋರಿ ಮೂಲ ದಾವಾ ಸಂಃ 25/2017 ದಾವೆಯನ್ನು ಹಿರಿಯ ಶ್ರೇಣಿಯ ನ್ಯಾಯಾಲಯ, ಹಳಿಯಾಳದಲ್ಲಿ ಚಾಲ್ತಿ ಇದೆ ಎಂದರೆ ಸರಿ. ಸದ್ರಿ ದಾವೆಯಲ್ಲಿ ಐ.ಎ. ಸಂಃ 20 ರಲ್ಲಿ ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ಅದರ ಪ್ಯಾರ ಸಂ. 3 ರಲ್ಲಿ ಮಾನ್ಯ

ನ್ಯಾಯಾಧೀಶರ ಮೇಲೆ ಆರೋಪ ಮಾಡಿರುತ್ತೇನೆ ಎಂಬ ಪ್ರಶ್ನೆಗೆ, ಈ ಸಮಯದಲ್ಲಿ ನ್ಯಾಯಾಲಯವು ಸದ್ರಿ ಪ್ರಶ್ನೆ ಪ್ರಕರಣಕ್ಕೆ ಹೇಗೆ ಸಂಬಂಧಿಸಿರುತ್ತದೆ ಎಂದು ಕೇಳಲಾಗಿ, ಸಾಕ್ಷಿಯು ಇಲ್ಲ-ಸಲ್ಲದ ಆರೋಪಗಳನ್ನು ಮಾಡುವ ಹವ್ಯಾಸ ಹೊಂದಿರುತ್ತಾರೆ ಎಂದು ತಿಳಿಸುತ್ತಾರೆ.

3. ನನಗೆ ಈಗ ತೋರಿಸಿದ ಆಫಿಡವಿಟ್‌ನ್ನು ನಾನೇ ಮಾಡಿರುವುದಾಗಿ ಒಪ್ಪಿಕೊಂಡಿರುತ್ತೇನೆ. ಹಾಗಾಗಿ ಸದ್ರಿ ದಾಖಲಾತಿಯನ್ನು ನಿ.ಡಿ 1 ಎಂದು ಗುರುತಿಸಲಾಯಿತು. ನಿಪಿ 2 ನ್ನು ನನಗೆ ತೋರಿಸಲಾಗಿ ಅದರಲ್ಲಿರುವ ಅಂಶಗಳನ್ನು ಬಿಡಿ-ಬಿಡಿಯಾಗಿ ಬರೆದಿದ್ದು, ಕೆಳಗಿನ ಅಂಶಗಳನ್ನು ಹಾಳೆ ಹೊಂದುಕೊಳ್ಳುವಂತೆ ಸಣ್ಣ ಅಕ್ಷರಗಳಲ್ಲಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಇಂಗ್ಲೀಷ ಹಾಗೂ ಕನ್ನಡ ಓದಲು ಬರೆಯಲು ಬರುತ್ತದೆ. ಆರೋಪಿ ನಿಪಿ 2 ನ್ನು ಬರೆಯಬಹುದಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು, ಆರೋಪಿ ನನಗೆ ನಿಪಿ 2 ನ್ನು ಬರೆಯಲು ಅಧಿಕಾರವನ್ನು ನೀಡಿರುತ್ತಾರೆ. ನಾನು ಆರೋಪಿಯಿಂದ ಖಾಲಿ ಹಾಳೆಯ ಮೇಲೆ ಸಹಿಯನ್ನು ಪಡೆದುಕೊಂಡು ಅದಕ್ಕೆ ಹೊಂದಾಣಿಕೆಯಾಗುವಂತೆ ಅಕ್ಷರಗಳನ್ನು ಬರೆದು ತುಂಬಿಸಿರುತ್ತೇನೆ ಎಂದರೆ ಸರಿಯಲ್ಲ.

4. ನಿಪಿ 3 ಆರೋಪಿಯ ಸಹಿಯನ್ನು ಖಾಲಿ ಚೆಕ್ಕನಲ್ಲಿ ಪಡೆದುಕೊಂಡು, ಒಕ್ಕಣಿಕೆಗಳನ್ನು ನಾನೇ ತುಂಬಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ಸಮಕ್ಷಮದಲ್ಲಿಯೇ ನಾನೇ ಒಕ್ಕಣಿಕೆಗಳನ್ನು ಬರೆದಿರುತ್ತೇನೆ ಎಂದು ನುಡಿದಿರುತ್ತಾರೆ. ಆರೋಪಿ ವಿದ್ಯಾವಂತರಾಗಿದ್ದರಿಂದ ಅವರೇ ಚೆಕ್ಕನ ಒಕ್ಕಣಿಕೆಗಳನ್ನು ಬರೆದು ನೀಡಬಹುದಾಗಿತ್ತು ಎಂದರೆ ಸಾಕ್ಷಿಯು ಆರೋಪಿಯ ಬೇರೆ ವ್ಯವಹಾರಿಕ ಚೆಕ್ಕಗಳನ್ನು ಸಹ ನಾನೇ ಬರೆದು ನೀಡುತ್ತಿದ್ದೆ.

(ಬೆಳಗಿನ ಕೋರ್ಟಿನ ಕಲಾಪ ಮುಗಿದಿದ್ದರಿಂದ ಪಾಟೀ ಸವಾಲನ್ನು ಮದ್ಯಾಹ್ನ ಅವಧಿಗೆ ಮುಂದೂಡಲಾಯಿತು)

**ಮುಂದುವರೆದ ಪಾಟೀಸವಾಲುಃ ಶ್ರೀ. ಬಿ.ಎನ್.ಆರ್ ವಕೀಲರಿಂದಃ**

5. ಆರೋಪಿ ಎಂದಿಗೂ ಯಾರಿಗೂ ಚೆಕ್ಕ ಮೇಲೆ ಒಕ್ಕಣಿಕೆಗಳನ್ನು ಬರೆಯಲು ಅಧಿಕಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಆರೋಗ್ಯ ಸರಿಯಿಲ್ಲದೇ ಇರುವುದರಿಂದ ಹಾಗೂ

ನನ್ನ ಕುಟುಂಬದ ತೊಂದರೆಗಳಿಗೆ ಕಾರಣ ನಾನೇ ಆರೋಪಿಯಿಂದ ಚೆಕ್ಕ ಡಿಸ್ಕೌಂಟ್ ಮಾಡಿಸಿಕೊಂಡು ಸಾಲವನ್ನು ಪಡೆದುಕೊಂಡು ನಾನೇ ಮರುಪಾವತಿ ಮಾಡುವುದಾಗಿ ತಿಳಿಸಿ, ಸದ್ರಿ ಚೆಕ್ಕಗಳನ್ನು ಅರೋಪಿಗಳಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಂದಿಗೂ ಆರ್ಥಿಕ ತೊಂದರೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿಯಿಂದ ವಾಸವಿ ಫೆನಾನ್ಸನಿಂದ ಒಂದು ಸಾಲದ ಅರ್ಜಿ ನಿಪಿ 1 ನ್ನು ಆರೋಪಿಯಿಂದ ಅರ್ಧಂಬರ್ಧ ತುಂಬಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2 ನ್ನು ಬರೆಯುವ ಸಂದರ್ಭದಲ್ಲಿ ನಿಪಿ 1 ನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

6. ಆರೋಪಿ ನಿಪಿ 1ನ್ನು ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯಾ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ನ್ನು ಸಾಲದ ಪಡೆದುಕೊಳ್ಳುವ ಸಂದರ್ಭದಲ್ಲಿ ಆರೋಪಿಯಿಂದ ಅರ್ಜಿ ಬರೆಸಿಕೊಂಡು "8 ಲಕ್ಷ ರೂಪಾಯಿ" ಎಂದು ನಾನೇ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದ ಆರೋಪಿಗೆ, ಸಾಲ ಬೇಕಾದಲ್ಲಿ ವಾಸವಿ ಪೈನಾನ್ಸ ಗೆ ಹೋದರೆ ನೀಡುತ್ತಾರೆ, ಅಲ್ಲಿ ನನಗೆ ಪರಿಚಯದವರು ಇದ್ದಾರೆ ಎಂದು ತಿಳಿಸಿರುತ್ತೇನೆ.

7. ಅರ್ಜಿ ತಿರಸ್ಕರಿಸಿದ ನಂತರ ಬ್ಯಾಂಕ್‌ನವರು ಯಾರಿಗೂ ವಾಪಾಸ ನೀಡುವುದಿಲ್ಲ ಎಂದರೆ ಸರಿಯಲ್ಲ. ತಿರಸ್ಕರಿಸಲು ಸಭೆಯಲ್ಲಿ ನಿರ್ಣಯ ಮಾಡಿ ತಿರಸ್ಕರಿಸುತ್ತಾರೆ, ಅದರ ಪ್ರತಿ ಅರ್ಜಿಯೊಂದಿಗೆ ಇಲ್ಲ, ಹಾಗಾಗಿ ಸದ್ರಿ ಅರ್ಜಿಯನ್ನು ನಾನೇ ಪ್ರಕರಣಗೋಸ್ಕರ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 7 ದಾಖಲೆಗೂ ಹಾಗೂ ಪ್ರಕರಣಕ್ಕೂ ಸಂಬಂಧ ಇದೆ. ನಿಪಿ 7 ಮತ್ತು 9 ನ್ನು ನಾನು ಆರೋಪಿಯ ಕುಟುಂಬದ ವಕೀಲನಾಗಿದ್ದರಿಂದ ಆರೋಪಿಯೇ ನನ್ನ ಬಳಿ ನೀಡಿರುತ್ತಾರೆ. ಆರೋಪಿಯ ಚಾರಿತ್ರ್ಯಾಕ್ಕೆ ಸಂಬಂಧಿಸಿದಂತೆ ನಿಪಿ 7 ಮತ್ತು 9 ನ್ನು ನೀಡಿರುತ್ತೇನೆ. ಆರೋಪಿಯ ಕುಟುಂಬಸ್ಥರೆಲ್ಲಾರು ನಾನು ಹೇಳಿದ ಮಾತುಗಳನ್ನು ಕೇಳುತ್ತಿದ್ದರು. ಅವರೆಲ್ಲಾರೂ ನನ್ನ ಮೇಲೆ ತುಂಬಾ ವಿಶ್ವಾಸ ಹೊಂದಿದ್ದರು

ಎಂದರೆ ಸರಿ. ಸಾಕ್ಷಿ ಮುಂದುವರೆದ ಅಂದರಂತೆ ಅವರ ಕೆಲಸವನ್ನು ನಾನು ಮಾಡಿಕೊಟ್ಟಿರುತ್ತೇನೆ.

8. ಆರೋಪಿಗೆ ಸಂಬಂಧಿಸಿದ ಅಸಲ ದಾವಾ ಸಂಃ 08/2011 ರ ದಾವೆಯನ್ನು ಆರೋಪಿಯ ನಡುವಳಿಕೆಗೋಸ್ಕರ ಅರ್ಧಕ್ಕೆ ಬಿಟ್ಟಿರುತ್ತೇನೆ. ನಾನು ಪ್ರಸ್ತುತ ಪ್ರಕರಣದ ಚೆಕ್ಕನ್ನು ನನ್ನ ಅಳಿಯ ಪ್ರಾಸಾ 1 ರವರಿಗೆ ನೀಡಿ, ಅವರು ಪ್ರಕರಣವನ್ನು ಹೂಡಲು ನೋಟೀಸ್‌ನ್ನು ಕಳುಹಿಸಿದ ನಂತರ ಸದ್ರಿ ದಾವೆಯಿಂದ ಹೊರಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿತರ ಕುಟುಂಬದಿಂದ ಅಸಲ ದಾವಾ ಸಂಃ 08/2011 ನಡೆಸಲು ಸುಮಾರು 8 ಲಕ್ಷ ಹಣವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ಆರೋಪಿಗೆ ಶಿಕ್ಷೆಯಾದಲ್ಲಿ ತನ್ನ ನೌಕರಿಯನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಕುಟುಂಬಸ್ಥರಗೆ 8 ಲಕ್ಷ ಹಣವನ್ನು ಬೇಡಿಕೆ ಇಟ್ಟಿರುತ್ತೀರಿ ಎಂದರೆ ಸರಿಯಲ್ಲ. ಸದ್ರಿ ಮಾತುಕತೆಯನ್ನು ಪಿರ್ಯಾದಿ ಮಾಡಿರುವುದಿಲ್ಲ ಬದಲಾಗಿ ನಾನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ.

9. ತದನಂತರ ನಾನು 3.5 ಲಕ್ಷಕ್ಕೆ ಒಪ್ಪಂದ ಮಾಡಿಕೊಳ್ಳುತ್ತೇನೆ ಎಂದು ಆರೋಪಿಗೆ ತಿಳಿಸಿ ಅವರಿಗೆ ಒತ್ತಾಯಪೂರ್ವಕದಿಂದ ಅಧಿಕಾರ ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಹೊಲ ಹೊಂದಿದವರು ಬ್ಯಾಂಕ್‌ನಿಂದ ಬೆಳೆಗಳಿಗೆ ಸಾಲವನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. ನಿಪಿ 17 ಅಸಲು ದಾವಾ ನಂ. 99/2001 ಆರೋಪಿಯ ಸಹೋದರ ಸಾಲವನ್ನು ಪಡೆದುಕೊಂಡ ವಿಚಾರವನ್ನು ತಿಳಿಸುವುದಕೋಸ್ಕರ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸದ್ರಿ ದಾಖಲೆಯು ಸಹ ಆರೋಪಿಯ ಚಾರಿತ್ರ್ಯಕ್ಕೆ ಸಂಬಂಧಿಸಿದ್ದು ಇರುತ್ತದೆ. ನಿಪಿ 18 ಪ್ರತಿವಾದ ಪತ್ರದಲ್ಲಿ ಮಳೆಯಿಂದಾಗಿ ತನ್ನ ಬೆಳೆ ನಾಶವಾಗಿದ್ದು, ತನಗೆ ಕಂತುಗಳನ್ನು ನೀಡಿದ್ದಲ್ಲಿ ತಾನು ಮರುಪಾವತಿ ಮಾಡವುದಾಗಿ ತಿಳಿಸಿರುತ್ತಾನೆ. ಸದ್ರಿ ದಾಖಲೆಯ ಸಹ ಆರೋಪಿಯ ಚಾರಿತ್ರ್ಯಕ್ಕೆ ಸಂಬಂಧಿಸಿದ್ದು

ಇರುತ್ತದೆ. ಎಲ್ಲಾ ದಾಖಲೆಗಳಿಗೂ ಹಾಗೂ ಆರೋಪಿಗೆ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ನಾನೇ ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ನಿಪಿ 29 ರಿಂದ 31 ಅರೋಪಿಯ ಸಹೋದರ ಸಹಿ ಮಾಡಿರುವ ಖಾಲಿ ವಕಾಲತ್ತುಗಳನ್ನು ನಾನು ಆರೋಪಿತರ ಕುಟುಂಬಸ್ಥರಿಗೆ ನೀಡಿರುವ ಸೇವೆಯನ್ನು ತೋರಿಸಲು ಹಾಜರುಪಡಿಸಿರುತ್ತೇನೆ. ಸದ್ರಿ ದಾಖಲಾತಿಗಳಿಂದ ನಾನು ಅರೋಪಿತರ ಕುಟುಂಬಸ್ಥರಿಂದ ಎಲ್ಲಿ ಬೇಕಾದಲ್ಲಿ ಖಾಲಿ ದಾಖಲಾತಿಗಳ ಮೇಲೆ ಸಹಿಗಳನ್ನು ಪಡೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನಿಪಿ 36 ಮರಣ ಪತ್ರ ಆರೋಯ ಹಿರಿಯ ಅಣ್ಣ ತೀರಿಹೋದ ದಿನಾಂಕವನ್ನು ತೋರಿಸಲು ಹಾಜರುಪಡಿಸಿರುತ್ತೇನೆ. ಪ್ರಕರಣಕ್ಕೂ ಹಾಗೂ ನಿಪಿ 36 ಕ್ಕೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 38 ನಾನು ಆರೋಪಿತರ ಕುಟುಂಬಕ್ಕೆ ಸಹಾಯ ಮಾಡಿದ್ದನ್ನು ತೋರಿಸಲು ಹಾಜರುಪಡಿಸಿರುತ್ತೇನೆ.

11. ನಿಪಿ 7 ರಿಂದ 41 ದಾಖಲಾತಿಗಳನ್ನು ಆರೋಪಿಯ ಕುಟುಂಬದೊಂದಿಗೆ ನನ್ನ ನಿಷ್ಠೆಯನ್ನು ತೋರಿಸಲು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿಯ ಎಲ್ಲಾ ದಾಖಲಾತಿಗಳನ್ನು ಬೇರೆ ಬೇರೆ ಉದ್ದೇಶಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಕೆಲವೊಂದು ದಾಖಲಾತಿಗಳನ್ನು ದಬಗಾರ ವಕೀಲರು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

12. ನನ್ನ ಮುಖ್ಯ ವಿಚಾರಣೆಯ 4 ನೇ ಪ್ಯಾರದಲ್ಲಿ ಸೈಮನ್ ಜಾನ್ ಕೋಯಿಲ್‌ರವರಿಂದ 5.50 ಸಾವಿರ ಹಣವನ್ನು ತೆಗೆದುಕೊಂಡಿದ್ದು, ಅದಕ್ಕೆ ಸಂಬಂಧಿಸಿದಂತೆ ಕ್ರಯ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಹೊಂದಿಸಲು ಪ್ಯಾರ ಸಂಖ್ಯೆ 4 ನ್ನು ಸೃಷ್ಟಿಸಿಕೊಂಡು ಬರೆದಿರುತ್ತೇನೆ ಎಂದರೆ ಸರಿಯಲ್ಲ. ನೀಲಕಂಠ ಬೋಬಾಟೆ ರವರ ವಿಷಯ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿದ್ದು ಸದ್ರಿ ಅಂಶ ದೂರಿನಲ್ಲಿರುವುದಿಲ್ಲ ಎಂದರೆ ಸರಿ.

13. ಪ್ಯಾರ ಸಂಖ್ಯೆ 6 ರಲ್ಲಿ ಹೈಲೇಟ್ ಮಾಡಿದ ಅಂಶವನ್ನು ಪ್ರಕರಣಗೋಸ್ಕರ ಸೃಷ್ಟಿಸಿಕೊಂಡು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಪ್ರಕರಣದ ನ್ಯೂನತೆಯನ್ನು ಸರಿಪಡಿಸಲು ವಿಷಯಗಳನ್ನು ಜೋಡಿಸಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದ ಸತ್ಯವನ್ನು ಹೊರ ತರಲು ಬರೆದಿರುತ್ತೇನೆ. ಸದ್ರಿ ಅಂಶಗಳನ್ನು ದೂರಿನೊಂದಿಗೆ ಸಲ್ಲಿಸಿರವುದಿಲ್ಲ ಹಾಗೂ ಅವುಗಳೆಲ್ಲವೂ ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

14. ಆರೋಪಿಯನ್ನು ಪಿರ್ಯಾದಿಯನ್ನು ನೋಡಿಯೇ ಇರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿ ತಮ್ಮ ಪಾಟೀ ಸವಾಲಿನಲ್ಲಿ 4 ಲಕ್ಷ ರೂಪಾಯಿ ಹಣವನ್ನು ನನ್ನ ಬಳಿ ತಂದು ಕೊಟ್ಟಿರುತ್ತೇನೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಹಾಗೂ 3 ತಿಂಗಳ ನಂತರ ನನ್ನ ಮಾವ ಅಂದರೆ ನಾನು ಚೆಕ್ಕನ್ನು ನೀಡಿರುತ್ತೇನೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ.

15. ಪಿರ್ಯಾದಿ ಪ್ಯಾರ ಸಂಃ 2 ರಲ್ಲಿ ಪಿರ್ಯಾದಿಯು ಚೆಕ್ಕನ್ನು ಆರೋಪಿ ನನಗೆ ಚೆಕ್ಕನಲ್ಲಿರುವ ಒಕ್ಕಣಿಕೆಗಳನ್ನು ಬರೆದು ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಚೆಕ್ಕನ ಒಕ್ಕಣಿಕೆಗಳನ್ನು ನಾನೇ ಬರೆದು ನೀಡಿರುತ್ತೇನೆ ಎಂದು ತಿಳಿಸುತ್ತಾರೆ. ಮುಖ್ಯ ವಿಚಾರಣೆ, ಪಿರ್ಯಾದು ಹಾಗೂ ಪಾಟೀ ಸವಾಲಿನಲ್ಲಿ ಬೇರೆ ಬೇರೆ ತಿಳಿಸಿರುತ್ತೆನೆ ಎಂದರೆ ಸರಿಯಲ್ಲ.

16. ಆರೋಪಿಯ ಕುಟುಂಬಕ್ಕೆ ನಿಷ್ಠಾವಂತ ವಕೀಲನಾಗಿ ಆರೋಪಿಯಿಂದ 4 ಲಕ್ಷ ಹಣವನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ನನ್ನ ಅಳಿಯ ಮೂಲಕ ಸುಳ್ಳು ಪ್ರಕರಣವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.